International Journal of Kannada Research 2022; 8(3): 78-82




International Journal of Kannada Research
www.kannadajournal.com

ISSN: 2454-5813
IJKR 2022; 8(3): 78-82
© 2022 IJKR
www.kannadajournal.com
Received: 26-05-2022
Accepted: 28-06-2022

**ಭೀಮಣ್ಣ ಪೋಮಣ್ಣ ಲಮಾಣಿ**
ಸಂಶೋಧನಾ ವಿಧ್ಯಾರ್ಥಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಕರ್ನಾಟಕ, ಭಾರತ

**ಡಾ. ಶಹತಾಜ್ ಬೇಗಂ**
ಸಹ ಪ್ರಾಧ್ಯಾಪಕರು, ಕರ್ನಾಟಕ ವಿಶ್ವವಿದ್ಯಾಲಯ ಶಿಕ್ಷಣ ಮಹಾವಿದ್ಯಾಲಯ, ಧಾರವಾಡ, ಕರ್ನಾಟಕ, ಭಾರತ

Corresponding Author:
**ಭೀಮಣ್ಣ ಪೋಮಣ್ಣ ಲಮಾಣಿ**
ಸಂಶೋಧನಾ ವಿಧ್ಯಾರ್ಥಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಕರ್ನಾಟಕ, ಭಾರತ

# ಬಂಜಾರ ಸಮುದಾಯದ ಸಾಮಾಜಿಕ, ಶೈಕ್ಷಣಿಕ ಮತ್ತು ರಾಜಕೀಯ ಸ್ಥಿತಿಗತಿಗಳು: ಒಂದು ಅಧ್ಯಯನ

**ಭೀಮಣ್ಣ ಪೋಮಣ್ಣ ಲಮಾಣಿ, ಡಾ. ಶಹತಾಜ್ ಬೇಗಂ**

**ಅಮೂರ್ತ**
ಭಾರತೀಯ ಕುಟುಂಬ ವ್ಯವಸ್ಥೆ ಮತ್ತು ಗ್ರಾಮೀಣ ಜೀವನವನ್ನು ಸಾಮಾನ್ಯವಾಗಿ ಭಾರತೀಯ ಸಾಮಾಜಿಕ ವ್ಯವಸ್ಥೆಯ ಆಧಾರ ಸ್ತಂಭಗಳೆಂದು ಕರೆಯಲಾಗುತ್ತದೆ.ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು ದಶಕಗಳು ಕಳೆದರು ಇನ್ನೂ ಹಲವಾರು ಬುಡಕಟ್ಟು, ಆದಿವಾಸಿ, ಅಲೆಮಾರಿ, ಅರೆಅಲೆಮಾರಿ ಜನರಿಗೆ ವ್ಯವಸ್ಥಿತವಾದ ಕ್ರಮದಲ್ಲಿ ಶಿಕ್ಷಣ ಸಿಗುತ್ತಿಲ್ಲ. ರಾಜಕೀಯದಲ್ಲಿ ಭಾವಹಿಸುವಲ್ಲಿ ಶಿಕ್ಷಣವು ಮಹತ್ವದ ಪಾತ್ರವನ್ನು ವಹಿಸುತ್ತದೆ.ಯಾವುದೇ ಒಂದು ಸಮುದಾಯವು ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ರಾಜಕೀಯ ಹೀಗೆ ಎಲ್ಲಾ ಕ್ಷೇತ್ರಗಳಲ್ಲಿ ಅಭಿವೃದ್ಧಿಯನ್ನು ಸಾಧಿಸುವಲ್ಲಿ ಉತ್ತಮ ನಾಯಕತ್ವದ ಅವಶ್ಯಕತೆಯಿದೆ. ಬಂಜಾರ ಸಮುದಾಯವನ್ನು ಅನೇಕ ಹೆಸುರುಗಳಿಂದ ಕರೆಯಲಾಗುತ್ತಿದ್ದು ಅವುಗಳೆಂದರೆ ಬಂಜಾರಿ, ಲಮಾಡಿ, ಲಮಾಣಿ, ಲಂಬಾರ, ಸುಗಾಳಿ ಇತ್ಯಾದಿ ಹೆಸುರುಗಳಿಂದ ಕರೆಯಲ್ಪಡುತ್ತದೆ.ಬಂಜಾರ ಸಮುದಾಯದ 250 ಪುರುಷರು, 250 ಮಹಿಳೆಯರ ಸಾಕ್ಷರತಾ ಪ್ರಮಾಣ, ವಿವಿಧ ಉದ್ಯೋಗಗಳಲ್ಲಿ ತೊಡಗಿಸಿಕೊಂಡಿರುವುದು, ರಾಜಕೀಯದಲ್ಲಿ ಪಾಲ್ಗೊಂಡಿರುವುದು ಮತ್ತು ಬಂಜಾರ ಸಮುದಾಯದ ಉಪಜಾತಿಗಳ ತಿಳಿಯಲು ಪ್ರಶ್ನಾವಳಿಗಳ ಮೂಲಕಸಮೀಕ್ಷಾ ವಿಧಾನವನ್ನು ಅನುಸರಿಸಲಾಯಿತು.

**ಕೀ ಪದಗಳು:** ಬಂಜಾರ ಸಮುಯಾದ ಹಿನ್ನೆಲೆ, ಬಂಜಾರ ಸಮುದಾಯದ ಸಾಮಾಜಿಕ, ಶೈಕ್ಷಣಿಕ ಮತ್ತು ರಾಜಕೀಯ ಸ್ಥಿತಿಗತಿಗಳು

## ಪೀಠಿಕೆ

ಏಷ್ಯಾ ಖಂಡದ ಒಂದು ಪರ್ಯಾಯ ದ್ವೀಪದಂತಿರುವ ಭಾರತವನ್ನು ಒಂದು ಉಪಖಂಡ ಎಂದು ಕರೆಯುತ್ತಾರೆ.ಉತ್ತರದ ಹಿಮಾಲಯ ಶ್ರೇಣಿ ಭಾರತವನ್ನು ಏಷ್ಯಾದಿಂದ ಪ್ರತ್ಯೇಕಿಸಿದೆ.ಭಾರತ ಉಪಖಂಡದಲ್ಲಿ ಬಹುಜನಾಂಗ, ಬಹುಭಾಷೆ, ಬಹಸಂಸ್ಕೃತಿ, ರಾಜಪ್ರಭುತ್ವ ಮತ್ತು ಗಣರಾಜ್ಯಗಳು ಕೂಡಿ ಬೆಳೆದವು ಮತ್ತು ಬಾಳಿದವು.ಭಾರತದ ಜೀವನಶೈಲಿಯಲ್ಲಿ ವಿವಿಧತೆಗಳಿವೆ. ಆಹಾರ, ಭಾಷೆ, ಸಂಸ್ಕೃತಿ, ಸಂಪ್ರದಾಯದಲ್ಲಿ ವಿವಿಧತೆ ಇದೆ.ಇಂತಹ ವೈವಿದ್ಯತೆಗಳ ಮಧ್ಯ ಏಕತೆಯಿಂದ ಇರುವುದು ಭಾರತದ ವಿಶಿಷ್ಟಗುಣವಾಗಿದೆ.ಭಾರತೀಯ ಕುಟುಂಬ ವ್ಯವಸ್ಥೆ ಮತ್ತು ಗ್ರಾಮೀಣ ಜೀವನವನ್ನು ಸಾಮಾನ್ಯವಾಗಿ ಭಾರತೀಯ ಸಾಮಾಜಿಕ ವ್ಯವಸ್ಥೆಯ ಆಧಾರ ಸ್ತಂಭಗಳೆಂದು ಕರೆಯಲಾಗುತ್ತದೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು ದಶಕಗಳು ಕಳೆದರು ಇನ್ನೂ ಹಲವಾರು ಬುಡಕಟ್ಟು, ಆದಿವಾಸಿ, ಅಲೆಮಾರಿ, ಅರೆಅಲೆಮಾರಿ ಜನರಿಗೆ ವ್ಯವಸ್ಥಿತವಾದ ಕ್ರಮದಲ್ಲಿ ಶಿಕ್ಷಣ ಸಿಗುತ್ತಿಲ್ಲ. 'ಲಮಾಣಿ' ಎಂಬ ಹೆಸರು ಬರಲು ಮೂಲ ಕಾರಣ "ಲವಣ" (ಉಪ್ಪು) ವನ್ನು ಗೋವುಗಳ ಮೇಲೆ ಸಾಗಟನೆ ಮಾಡಿ ವಿವಿಧ ಪ್ರದೇಶಗಳಲ್ಲಿ ಮಾರಾಟ ಮಾಡುತ್ತಿದ್ದರು. "ಲವಣ" ಎಂಬ ಶಬ್ದವು ಕಾಲಕ್ರಮೇಣ "ಲಮಾಣಿ" ಎಂದು ಪರಿವರ್ತನೆಗೊಂಡಿದೆ. ಅದೇ ರೀತಿಯಾಗಿ "ಗೋರ" ಎಂದು ಕರೆಯಲು ಕಾರಣ ಬಂಜಾರರು ಮೂಲತ: ದನ-ಕರು, ಕುರಿ-ಆಡು ಮತ್ತು ಕುದುರೆಗಳನ್ನು ಸಾಕುತ್ತಿದ್ದರು. "ಗೋ" ಎಂದರೆ ಆಕಳು ಎಂದರ್ಥ "ರು" ಎಂದರೆ ಸಾಕು ಎಂದರ್ಥ. ಬಂಜಾರರು ಹೆಚ್ಚಿನ ದನಕರುಗಳನ್ನು ಸಾಕುತ್ತಿದ್ದರಿಂದ ಅವರಿಗೆ 'ಗೋರ' ಎಂದು ಕರೆಯುತ್ತಾರೆ. ಹಾಗೆಯೇ "ಬಂಜಾರಾ" ಎಂಬ ಪದವು "ಬನಚಾರ" ಅಥವಾ ""ವನಚಾರ" ಎಂಬ ಸಂಸ್ಕೃತ ಪದದಿಂದ ಬಂದಿದೆ.ಬನಚಾರ ಎಂದರೆ ಅರಣ್ಯದಲ್ಲಿ ಸುತ್ತಾಡಿ ಕಟ್ಟಿಗೆ ಸಂಗ್ರಹಿಸಿ ಮಾರುವುದು ಎಂದರ್ಥ.ಕಾಲಕ್ರಮೇಣ "ಬನಚಾರ್" ಶಬ್ದ "ಬಂಜಾರಾ" ಎಂದು ಪರಿವರ್ತನೆಯಾಗಿದೆ ಎಂದು ಹೇಳಲಾಗಿದೆ.ರಾಜಕೀಯ ಪಾಲ್ಗೊಳ್ಳುವಿಕೆ ಎಂದರೆ ಜನರು ತಮ್ಮ

ಹಿತಾಸಕ್ತಿಗಳ ಸಂರಕ್ಷಣೆಗಾಗಿ ಸಮಾಜದ ಜರನ ಐಚ್ಛಿಕ ಬಯಕೆಗಳ ಈಡೇರಿಕೆಗಾಗಿ ಜನಪ್ರತಿನಿಧಿಗಳನ್ನು ಆಯ್ಕೆ ಮಾಡುವ ಮತ್ತು ಸಾರ್ವಜನಿಕ ನೀತಿನಿರೂಪಣೆಗಳನ್ನು ರೂಪಿಸುವ ಸಲುವಾಗಿ ರಾಜಕೀಯ ಚಟುವಟಿಕೆಗಳಲ್ಲಿ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಸಹಭಾಗಿತ್ವವನ್ನು ತೆಗೆದುಕೊಳ್ಳಲಾಗಿದೆ.ಈ ರಾಜಕೀಯ ಪಾಲ್ಗೊಳ್ಳುವಿಕೆಯು ಸಮಾಜದಲ್ಲಿ ಅಸಮಾನತೆಯನ್ನು ಹೊಡೆದೋಡಿಸಲು ಅವಶ್ಯಕವಾಗಿರುವ ಸಾಧನವೆಂದರೆ ತಪ್ಪಾಗುವುದಿಲ್ಲ. ಸಂವಿಧಾನದ ಪೀಠಿಕೆಯಲ್ಲಿ ಇರುವಂತೆ ಪ್ರಜಾಪ್ರಭುತ್ವದ ಆಧಾರ ಸ್ಥಂಭಗಳಾದ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವವನ್ನು ಪರಿಹರಿಸಬೇಕಾದರೆ ರಾಜಕೀಯ ಸಹಭಾಗಿತ್ವ ಅನಿವಾರ್ಯವಾಗಿದೆ. ಯಾವುದೇ ಸಮಾಜ ರಾಕೀಯದಲ್ಲಿ ಹೆಚ್ಚೆಚ್ಚು ಪಾಲ್ಗೊಳ್ಳುವಂತೆ ರಾಜಕೀಯ ವ್ಯವಸ್ಥೆಯು ಸುಭದ್ರವಾಗುವುದರಲ್ಲಿ ಸಂದೇಹವೇ ಇಲ್ಲ. ಸಮಾಜವು ಪ್ರಜಾಪ್ರಭುತ್ವದ ಯಶಸ್ವಿಗೆ ಗರಿಷ್ಠಮಟ್ಟದಲ್ಲಿ ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸುವ ಮೂಲಕ ಅಭಿವೃದ್ಧಿಯ ಜೊತೆಗೆ ಸರಕಾರದ ಕಾರ್ಯಚಟುವಟಿಕೆಯ ಅರಿವು ರಾಜಕೀಯ ಪಾಲ್ಗೊಳ್ಳುವಿಕೆಯಿಂದ ಸಿಗುತ್ತದೆ. ಯಾವುದೇ ಸಮಾಜದ ವ್ಯಕ್ತಿಯು ತಾನು ರಾಜಕೀಯದಲ್ಲಿ ಪಾಲ್ಗೊಳ್ಳುವ ಮೂಲಕ ತಮ್ಮ ಸಮಾಜದ ಹಿತಾಸಕ್ತಿಯನ್ನು ಮಾಡಿಸಿಕೊಳ್ಳಬಹುದು.

**ಸಾಹಿತ್ಯಾವಲೋಕನ**

- ಸಣ್ಣರಾಮನಾಯಕ್, 'ಲಂಬಾಣಿ ಸಂಸ್ಕೃತಿ–ಒಂದು ಸಾಂಸ್ಕೃತಿಕ ಅಧ್ಯಯನ' (1999): ತಮ್ಮ ಸಂಶೋಧನಾ ವರದಿಯಲ್ಲಿ ಲಂಬಾಣಿ ಸಂಸ್ಕೃತಿಯ ವಿವಿಧ ಆಯಾಮಗಳ ಕುರಿತು ವಿವರಿಸುತ್ತಾ ಸಂಸ್ಕೃತಿಕ ಅಂಶಗಳನ್ನು ಮಾತ್ರ ಪರಿಗಣಿಸಿ ರಾಜಕೀಯ ಅಂಶಗಳನ್ನು ನಿರ್ಲಕ್ಷಿಸಿರುತ್ತಾರೆ. ಆದರೆ ಈ ಸಮುದಾಯದ ಅಭಿವೃದ್ಧಿ ಮಾರ್ಪಾಟುಗಳು ಪ್ರಾದೇಶಿಕ ಬಲದಾವಣೆಗಳ ಮತ್ತು ಮಾನವಶಾಸ್ತ್ರ ಸಾಹಿತ್ಯವನ್ನು ಸಮೃದ್ಧಿಗೊಳಿಸಿರುವುದರ ಬಗ್ಗೆ ಬೆಳಕು ಚೆಲ್ಲಿರುತ್ತಾರೆ.
- ಡಾ. ಪಂಡಿತ ಕೆ.ರಾಠೋಡ, 'ಬಂಜಾರ ಸಂಸ್ಕೃತಿ ಕಥನ' (2015): ಈ ಗ್ರಂಥದಲ್ಲಿ ಬಂಜಾರರ ಪ್ರಾಚೀನ ಇತಿಹಾಸದಲ್ಲಿ ಬಂಜಾರರು ಎಂದರೆ ಯಾರು? ಬಂಜಾರರನ್ನು ಗುರುತಿಸುವ ಮಾನದಂಡಗಳು, ಲಂಬಾಣಿ, ಲಮಾಣಿ ಪದಗಳ ಉತ್ಪತ್ತಿಯ ಹಿನ್ನೆಲೆ, ಬಂಜಾರರ ಪ್ರಾಚೀನತೆ, ಬಂಜಾರರ ವ್ಯಾಪಾರ ಮಾರ್ಗಗಳು, ಸಮುದಾಯದಲ್ಲಿರುವ ಆಂತರಿಕ ಸಂಘರ್ಷಗಳು, ಮೀಟುಭುಕ್ಯಾನ ಕಳ್ಳತನ ಮತ್ತು ಮಾನವೀಯತೆ, ಹೀಗೆ ಕೆಲವೊಂದು ಲೂಟಿ ಮಾಡಿದ ಪ್ರಸಂಗಗಳು, ಕೆಲವೊಂದು ಸಂಘರ್ಷಗಳ ಪ್ರಾಚೀನ ಇತಿಹಾಸ, ಬಂಜಾರರ, ರಾಠೋಡ, ಚವ್ಹಾಣ, ಪವಾರ, ಮನೆತನಗಳು, ಬಂಜಾರರ ಚಾರಿತ್ರಿಕೆ ನಾಯಕ ಐತಿಹಾಸಿಕ ವೀರನಾಯಕರು, ಇಂದ್ರಸಿಂಗ್, ರಾಠೋಡ, ಭಟಾವ, ಗೋಪಿಚಂದ, ಸೋನಾಯಿರಾಜ, ಐತಿಹಾಸಿಕ ಹಿನ್ನೆಲೆ ತಿಳಿಸುವುದರ ಜೊತೆಗೆ, ಬಂಜಾರರಲ್ಲಿ ನ್ಯಾಯ ವ್ಯವಸ್ಥೆಯ ಭಿನ್ನತೆ ಕುರಿತು ಹಾಗು ಬಂಜಾರರ ಸಾಹಿತ್ಯ ಭಾಷೆ, ಅದರಲ್ಲೂ ಬಂಜಾರ–ಮಾರವಾಡಿ ಭಾಷಾ ಸಂಬಂಧಗಳು, ರೋಮಾ ಬಂಜಾರಿ ಸಂಬಂಧಗಳನ್ನು ಐತಿಹಾಸಿಕವಾಗಿ ಸವಿವರವಾಗಿ ತಿಳಿಸಿದ್ದಾರೆ.
- ಸುಭಾಶ್ ಆರ್ ಜಾಧವ್., "ಲಂಬಾಣಿ ಮೈಗ್ರೇಂಟ್ಸ ಎ ಸೋಶಿಯಾಲಜಿ ಸ್ಟಡಿ" (2019) ಎಂಬ ಮಹಾಪ್ರಬಂಧಕ್ಕೆ ಕರ್ನಾಟಕ ವಿಶ್ವವಿದ್ಯಾಲಯದಿಂದ ಪಿಎಚ್.ಡಿ ಪದವಿಯನ್ನು ಪಡೆದಿದ್ದಾರೆ. ಇವರ ಸಂಶೋಧನೆಯಲ್ಲಿ ಲಂಬಾಣಿ ಜನಾಂಗದವರು ವಲಸೆ ಹೋಗಲು ಮೂಲಕಾರಣವನ್ನು ಪತ್ತೆಹಚ್ಚಿದ್ದಲ್ಲದೇ ಲಂಬಾಣಿಗರು ಮೂಲತಃ ಪ್ರಾಚೀನ ಕಾಲದಿಂದಲೂ ವ್ಯಾಪಾರಿಗಳಾಗಿದ್ದರು ಎಂಬುವುದನ್ನು ತಮ್ಮ ಅಧ್ಯಯನದಲ್ಲಿ ತಿಳಿಸಿದ್ದಾರೆ. ಸಂಶೋಧನಾ ಅಧ್ಯಯನದಲ್ಲಿ ಲಂಬಾಣಿಗರ ಸಂಪ್ರದಾಯಗಳ ಬಗ್ಗೆ, ಹಬ್ಬ ಹರಿದಿನಗಳ ಬಗ್ಗೆ ವಿವರಿಸಿದ್ದಾರೆ. ಇವರ ಅಧ್ಯಯನದ ಕ್ಷೇತ್ರವು ಬಿಜಾಪುರ ಜಿಲ್ಲೆಯನ್ನು ಆಯ್ಕೆ ಮಾಡಿಕೊಂಡು ಜಿಲ್ಲೆಯಲ್ಲಿರುವ ತಾಂಡಾಗಳಿಗೆ ಭೇಟಿ ನೀಡಿ ಮಾಹಿತಿದಾರರಿಂದ ವಲಸೆ ಹೋಗಲು ಪ್ರಮುಖ ಕಾರಣಗಳನ್ನು ಪತ್ತೆಹಚ್ಚಿದ್ದಾರೆ. ಅಷ್ಟೇ ಅಲ್ಲದೇ ಕರ್ನಾಟಕದಲ್ಲಿ ವಾಸವಿರುವ ಲಂಬಾಣಿ ಸಮುದಾಯಗಳ ಅಧ್ಯಯನ ನಡೆಯಬೇಕೆಂದು ಹೇಳಿದ್ದಾರೆ.

**ಅಧ್ಯಯನದ ಉದ್ದೇಶಗಳು**

- ಬಂಜಾರ ಸಮುದಾಯದ ಪುರುಷ ಮತ್ತು ಮಹಿಳೆಯರ ಸಾಕ್ಷರತಾ ಪ್ರಮಾಣದ ಬಗ್ಗೆ ಅಧ್ಯಯನ ಮಾಡುವುದು.
- ಬಂಜಾರ ಸಮುದಾಯದವರು ವಿವಿಧ ಉದ್ಯೋಗಗಳಲ್ಲಿ ತೊಡಗಿಸಿಕೊಂಡಿರುವುದರ ಬಗ್ಗೆ ಅಧ್ಯಯನ ಮಾಡುವುದು.
- ಬಂಜಾರ ಸಮುದಾಯದವರು ರಾಜಕೀಯದಲ್ಲಿ ಪಾಲ್ಗೋಳ್ಳುವುದರಕುರಿತು ಅಧ್ಯಯನ ಮಾಡುವುದು.
- ಬಂಜಾರ ಸಮುದಾಯದಲ್ಲಿ ಕಂಡು ಬರುವ ವಿವಿಧ ಉಪಜಾತಿಗಳ ಬಗ್ಗೆ ಅಧ್ಯಯನ ಮಾಡುವುದು.

**ಅಧ್ಯಯನದ ಸಮಸ್ಯೆಯ ಹೇಳಿಕೆ**

ಬಂಜಾರ ಸಮುದಾಯದ ಸಾಮಾಜಿಕ, ಶೈಕ್ಷಣಿಕ ಮತ್ತು ರಾಜಕೀಯ ಸ್ಥಿತಿಗಳು: ಒಂದು ಅಧ್ಯಯನ.

**ಸಂಶೋಧನಾ ವಿಧಾನ**

ಈ ಅಧ್ಯಯನವು ಧಾರವಾಡ ಜಿಲ್ಲೆಯಲ್ಲಿ ಕಂಡುಬರುವ ಕೆಲವು ತಾಂಡಾಗಳಿಗೆ ಭೇಟಿ ನೀಡಿ ಸಮೀಕ್ಷಾ ವಿಧಾನದಿಂದ ಪ್ರಶ್ನಾವಳಿಗಳ ಮೂಲಕ ಬಂಜಾರ ಸಮುದಾಯದ ಸಾಮಾಜಿಕ, ಶೈಕ್ಷಣಿಕ ಮತ್ತು ರಾಜಕೀಯ ಸ್ಥಿತಿಗತಿಗಳಿಗೆ ಸಂಬಂಧಿಸಿದಂತೆ ಮಾಹಿತಿದಾರರ ಕುಟುಂಬದ ವಯಕ್ತಿಕ ಮಾಹಿತಿಯನ್ನು ಸಂಗ್ರಹಿಸಲಾಯಿತು.

**ಮಾದರಿ ಆಯ್ಕೆ**

ಧಾರವಾಡ ಜಿಲ್ಲೆಯ ಐದು ತಾಲೂಕಗಳಲ್ಲಿ ವಾಸಿಸುತ್ತಿರುವ ತಾಂಡಾಗಳಿಂದ 500 ಜನರ ಕುಟುಂಬಗಳಿಂದ ಮಾಹಿತಿಯನ್ನು ಸರಳ ಯಾದೃಚ್ಛಿಕ (ರ್‍ಯಾಂಡಮ್) ಮಾದರಿಯ ವಿಧಾನವನ್ನು ಅನುಸರಿಸಿ ಮಾಹಿತಿಯನ್ನು ಸಂಗ್ರಹಿಸಲಾಯಿತು.

**ಅಧ್ಯಯನದ ಇತಿಮಿತಿಗಳು**

- ಈ ಅಧ್ಯಯನವು ಧಾರವಾಡ ಜಿಲ್ಲೆಗೆ ಮಾತ್ರ ಸೀಮಿತವಾಗಿದೆ.
- ಪ್ರಸ್ತುತ ಅಧ್ಯಯನವು ಧಾರವಾಡ ಜಿಲ್ಲೆಯ ಬಂಜಾರ ಸಮುದಾಯದವರಿಗೆ ಮಾತ್ರ ಸಂಬಂಧಿಸಿದೆ.
- ಈ ಅಧ್ಯಯನವು ಧಾರವಾಡ ಜಿಲ್ಲೆಯ ನಿರ್ಧಿಷ್ಟ ತಾಂಡಾಗಳಿಗೆ ಸೀಮಿತವಾಗಿದೆ.
- ಈ ಅಧ್ಯಯನಕ್ಕೆ ಒಟ್ಟು 500(ಪುರುಷರು 250, ಮಹಿಳೆಯರು 250) ಮಾಹಿತಿದಾರರನ್ನು ಆಯ್ಕೆಮಾಡಿಕೊಳ್ಳಲಾಗಿದೆ.

**ಸಂಶೋಧನಾ ಅಧ್ಯಯನದ ವಿಶ್ಲೇಷಣೆ**

ಪುರುಷ ಮತ್ತು ಮಹಿಳಾ ಮಾಹಿತಿದಾರರ ಶೈಕ್ಷಣಿಕ ವಿವರ:

| ಕ್ರ.ಸಂ. | ವಿದ್ಯಾರ್ಹತೆ | ಪುರುಷರು | ಪ್ರತಿಶತ | ಮಹಿಳೆಯರು | ಪ್ರತಿಶತ | ಒಟ್ಟು | ಪ್ರತಿಶತ |
|---|---|---|---|---|---|---|---|
| 1 | ಪ್ರಾಥಮಿಕ ಶಿಕ್ಷಣ | 23 | 9.2 | 26 | 10.4 | 49 | 9.8 |
| 2 | ಮಾಧ್ಯಮಿಕ ಶಿಕ್ಷಣ | 42 | 16.8 | 38 | 15.2 | 80 | 16 |
| 3 | ಪದವಿ ಪೂರ್ವ | 45 | 18 | 45 | 18 | 90 | 18 |
| 4 | ಪದವಿ | 58 | 23.2 | 56 | 22.4 | 114 | 22.8 |
| 5 | ಸ್ನಾತಕೋತ್ತರ ಪದವಿ | 70 | 28 | 57 | 22.8 | 127 | 25.4 |
| 6 | ಅನಕ್ಷರಸ್ಥರು | 12 | 4.8 | 28 | 11.2 | 40 | 8 |
| ಒಟ್ಟು | | 250 | 100 | 250 | 100 | 500 | 100 |

(ಮೂಲ: ಕ್ಷೇತ್ರ ಅಧ್ಯಯನದಲ್ಲಿ ಸಂಗ್ರಹಿಸಿದ ಅಂಕಿ ಅಂಶಗಳ ವಿವರ)

ಈ ಮೇಲಿನ ಕೋಷ್ಟಕವು ಧಾರವಾಡ ಜಿಲ್ಲೆಯ ಬಂಜಾರ ಸಮುದಾಯದ ಪುರುಷ ಮತ್ತು ಮಹಿಳಾ ಮಾಹಿತಿದಾರರ ಶೈಕ್ಷಣಿಕ ಪ್ರಮಾಣವನ್ನು ನೋಡಿದಾಗ, ಬಹುತೇಕ ಬಂಜಾರ ಸಮುದಾಯದ ಪುರುಷ ಮತ್ತು ಮಹಿಳೆಯರು ನಗರ ಪ್ರದೇಶಕ್ಕೆ ಹತ್ತಿರವಿರುವ ತಾಂಡಾಗಳಲ್ಲಿ ವಾಸವಾಗಿದ್ದರಿಂದ ನಗರದ ಸಂಪರ್ಕದಿಂದ ಬಂಜಾರ ಸಮುದಾಯದ ಕುಟುಂಬಗಳ ಮೇಲೆ ಶಿಕ್ಷಣದ ಪ್ರಭಾವ ಬಿದ್ದಿರುವುದು ಕಂಡುಬರುತ್ತದೆ. ಈ ಅಧ್ಯಯನದಲ್ಲಿ 460 ಪುರುಷ ಮತ್ತು ಮಹಿಳಾ ಮಾಹಿತಿದಾರರು ಶಿಕ್ಷಣವನ್ನು ಪಡೆದವರಾಗಿದ್ದಾರೆ ಹಾಗೆಯೇ 40 ಪುರುಷ ಮತ್ತು ಮಹಿಳಾ ಮಾಹಿತಿದಾರರು ಅನಕ್ಷರಸ್ಥರಿರುವುದು ಕಂಡು ಬರುತ್ತದೆ. ಅದರಲ್ಲಿ ಶೇಕಡ 9.2ರಷ್ಟು ಪುರುಷರು ಪ್ರಾಥಮಿಕ ಶಿಕ್ಷಣವನ್ನು ಕಲಿತರೇ, ಮಾಧ್ಯಮಿಕ ಶಿಕ್ಷಣವನ್ನು ಶೇಕಡ 16.8ರಷ್ಟು ಪುರುಷರು ಪಡೆದಿದ್ದಾರೆ, ಇನ್ನೂ ಪದವಿ ಪೂರ್ವ ಶಿಕ್ಷಣವನ್ನು ಶೇಕಡ 18ರಷ್ಟು ಪುರುಷರು ಪಡೆದಿದ್ದಾರೆ, ಅದೇ ರೀತಿ ಪದವಿ ಶಿಕ್ಷಣವನ್ನು ಶೇಕಡ 23.2ರಷ್ಟು ಪುರುಷರು ಪಡೆದಿದ್ದಾರೆ, ಶೇಕಡ 28ರಷ್ಟು ಪುರುಷರು ಸ್ನಾತಕೋತ್ತರ ಶಿಕ್ಷಣ ಪದವಿಯನ್ನು ಪಡೆದಿದ್ದಾರೆ, ಶೇಕಡ 4.8ರಷ್ಟು ಪುರುಷರು ಅನಕ್ಷರಸ್ಥರಿರುವುದು ಕಂಡುಬರುತ್ತದೆ. ಅದೇ ರೀತಿ ಶೇಕಡ 10.4ರಷ್ಟು ಮಹಿಳೆಯರು ಪ್ರಾಥಮಿಕ ಶಿಕ್ಷಣವನ್ನು ಕಲಿತರೇ, ಮಾಧ್ಯಮಿಕ ಶಿಕ್ಷಣವನ್ನು ಶೇಕಡ 15.2ರಷ್ಟು ಮಹಿಳೆಯರು ಪಡೆದಿದ್ದಾರೆ, ಇನ್ನೂ ಪದವಿ ಪೂರ್ವ ಶಿಕ್ಷಣವನ್ನು ಶೇಕಡ 18ರಷ್ಟು ಮಹಿಳೆಯರು ಪಡೆದಿದ್ದಾರೆ, ಅದೇ ರೀತಿ ಪದವಿ ಶಿಕ್ಷಣವನ್ನು ಶೇಕಡ 22.4 ರಷ್ಟು ಮಹಿಳೆಯರು ಪಡೆದಿದ್ದಾರೆ, ಶೇಕಡ 22.8 ರಷ್ಟು ಮಹಿಳೆಯರು ಸ್ನಾತಕೋತ್ತರ ಶಿಕ್ಷಣ ಪದವಿಯನ್ನು ಪಡೆದಿದ್ದಾರೆ, ಶೇಕಡ 11.2 ರಷ್ಟು ಮಹಿಳೆಯರು ಅನಕ್ಷರಸ್ಥರಿರುವುದು ಕಂಡುಬಂದಿದೆ. ಒಟ್ಟಾರೆಯಾಗಿ ಶೇಕಡ 9.8 ರಷ್ಟು ಪುರುಷ ಮತ್ತು ಮಹಿಳೆಯರು ಪ್ರಾಥಮಿಕ ಶಿಕ್ಷಣವನ್ನು ಕಲಿತರೇ, ಮಾಧ್ಯಮಿಕ ಶಿಕ್ಷಣವನ್ನು ಶೇಕಡ 16ರಷ್ಟು ಪುರುಷ ಮತ್ತು ಮಹಿಳೆಯರು ಪಡೆದಿದ್ದಾರೆ, ಪದವಿ ಪೂರ್ವ ಶಿಕ್ಷಣವನ್ನು ಶೇಕಡ 18ರಷ್ಟು ಪುರುಷ ಮತ್ತು ಮಹಿಳೆಯರು ಪಡೆದಿದ್ದಾರೆ, ಅದೇ ರೀತಿ ಪದವಿ ಶಿಕ್ಷಣವನ್ನು ಶೇಕಡ 22.8 ರಷ್ಟು ಪುರುಷ ಮತ್ತು ಮಹಿಳೆಯರು ಪಡೆದಿದ್ದಾರೆ, ಶೇಕಡ 25.4 ರಷ್ಟು ಪುರುಷ ಮತ್ತು ಮಹಿಳೆಯರು ಸ್ನಾತಕೋತ್ತರ ಶಿಕ್ಷಣ ಪದವಿಯನ್ನು ಪಡೆದಿದ್ದಾರೆ, ಶೇಕಡ 8ರಷ್ಟು ಪುರುಷ ಮತ್ತು ಮಹಿಳೆಯರು ಅನಕ್ಷರಸ್ಥರಿರುವುದು ಕಂಡುಬಂದಿದೆ. ಈ ಮೇಲಿನ ಕೋಷ್ಟಕವನ್ನು ಗಮನಿಸಿದಾಗ ಬಂಜಾರ ಸಮುದಾಯದ ಪುರುಷ ಮತ್ತು ಮಹಿಳೆಯರು ಶಿಕ್ಷಣಕ್ಕೆ ಹೆಚ್ಚಿನ ಪ್ರಾಧ್ಯಾನತೆ ಕೊಡುವುದರ ಕಡೆ ಗಮನ ಹರಿಸಿದ್ದಾರೆ, ಅಂತಿಮವಾಗಿ ಪುರುಷರು ಮತ್ತು ಮಹಿಳೆಯರು ಉನ್ನತ ಶಿಕ್ಷಣ ಪಡೆಯುವುದರ ಜೊತೆಗೆ ಸಮುದಾಯದ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಬೇಕಾಗಿದೆ.

ಮಾಹಿತಿದಾರರ ಪ್ರಸ್ತುತ ಉದ್ಯೋಗಗಳ ವರ್ಗೀಕರಣ:

| ಕ್ರ.ಸಂ. | ಉದ್ಯೋಗ | ಪುರುಷರು | ಪ್ರತಿಶತ | ಮಹಿಳೆಯರು | ಪ್ರತಿಶತ | ಒಟ್ಟು | ಪ್ರತಿಶತ |
|---|---|---|---|---|---|---|---|
| 1 | ಶಿಕ್ಷಕರು | 45 | 18 | 22 | 8.8 | 67 | 13.4 |
| 2 | ಆರಕ್ಷಕರು | 10 | 4 | 04 | 1.6 | 14 | 2.8 |
| 3 | ಕೃಷಿ | 56 | 22.4 | 36 | 14.4 | 92 | 18.4 |
| 4 | ವ್ಯಾಪಾರ | 44 | 17.6 | 23 | 9.2 | 67 | 13.4 |
| 5 | ಕೂಲಿ | 40 | 16 | 44 | 17.6 | 84 | 16.8 |
| 6 | ಮನೆಗೆಲಸ | 00 | 00 | 58 | 23.2 | 58 | 11.6 |
| 7 | ಇತರೆ | 55 | 22 | 63 | 25.2 | 118 | 23.6 |
| ಒಟ್ಟು | | 250 | 100 | 250 | 100 | 500 | 100 |

(ಮೂಲ: ಕ್ಷೇತ್ರ ಅಧ್ಯಯನದಲ್ಲಿ ಸಂಗ್ರಹಿಸಿದ ಅಂಕಿ ಅಂಶಗಳ ವಿವರ)

ಈ ಮೇಲಿನ ಕೋಷ್ಟಕವು ಮಾಹಿತಿದಾರರ ಪ್ರಸ್ತುತ ಉದ್ಯೋಗಗಳ ಕುರಿತಾದ ವಿವರಣೆಯನ್ನು ನೀಡುತ್ತದೆ.ಶೇಕಡ 18 ರಷ್ಟು, ಪುರುಷರು ಶಿಕ್ಷಕ ವೃತ್ತಿಯಲ್ಲಿ ತೊಡಗಿರುವುದು ಕಂಡು ಬಂದರೆ, ಶೇಕಡ 4 ರಷ್ಟು, ಪುರುಷರು, ಆರಕ್ಷಕ (ಪೋಲಿಸ್) ವೃತ್ತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ, ಶೇಕಡ 22.4ರಷ್ಟು ಪುರುಷರು, ದೇಶದ ಬೆನ್ನೆಲುಬು ಆದ ಕೃಷಿಯಲ್ಲಿ ತೊಡಗಿರುವುದು ಕಂಡುಬರುತ್ತದೆ.ಶೇಕಡ 17.6 ರಷ್ಟು ಪುರುಷರು ವ್ಯಾಪಾರ ವಹಿವಾಟುಗಳಲ್ಲಿ ತೊಡಗಿರುವುದು ಕಂಡು ಬರುತ್ತದೆ.ಶೇಕಡ 16 ರಷ್ಟು ಪುರುಷರು ವಿವಿಧ ರೀತಿಯ ಕೂಲಿ ಕೆಲಸಗಳಲ್ಲಿ ತೊಡಗಿರುವುದು ಕಂಡುಬಂದರೆ, ಶೇಕಡ 55ರಷ್ಟು ಪುರುಷರು

ಬೇರೆ ಬೇರೆ ಕಾರ್ಯದಲ್ಲಿ ತೊಡಗಿರುವುದು ಕಂಡುಬರುತ್ತದೆ. ಅಷ್ಟೆ ಅಲ್ಲದೇ ಅಧ್ಯಯನದ ಮಾಹಿತಿದಾರರಾಗಿ ಮಹಿಳೆಯರು ಯಾವ ಯಾವ ವೃತ್ತಿಗಳಲ್ಲಿ ಭಾಗಿಗಳಾಗಿದ್ದಾರೆ ಎನ್ನುವುದನ್ನು ನೋಡಿದರೆ, ಶೇಕಡ 8.8ರಷ್ಟು ಮಹಿಳೆಯರು ಶಿಕ್ಷಕಿಯರಾಗಿ ಕಾರ್ಯಮಾಡುತ್ತಿದ್ದರೆ, 1.6 ರಷ್ಟು ಮಹಿಳೆಯರು ಆರಕ್ಷಕ (ಪೋಲಿಸ್) ರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಶೇಕಡ 14.4 ರಷ್ಟು ಮಹಿಳೆಯರು ದೇಶದ ಬೆನ್ನಲುಬು ಆದ ಕೃಷಿಯಲ್ಲಿ ತೊಡಗಿಕೊಂಡಿದ್ದಾರೆ. ಶೇಕಡ 9.2ರಷ್ಟು ಮಹಿಳೆಯರು ವಿವಿಧ ರೀತಿಯ ವ್ಯಾಪಾರ ವೃತ್ತಿಗಳಲ್ಲಿ ತೊಡಗಿದ್ದಾರೆ. ಶೇಕಡ 17.6 ರಷ್ಟು ಮಹಿಳೆಯರು ಕೂಲಿ ಕೆಲಸಗಳಲ್ಲಿ ತೊಡಗಿಕೊಂಡಿದ್ದಾರೆ.ಇನ್ನೂ ಶೇಕಡ 23.2 ರಷ್ಟು ಮಹಿಳೆಯರು ತಮ್ಮ ಮನೆಯ ಕೆಲಸಗಳಲ್ಲಿ ತೊಡಗಿಕೊಂಡಿದ್ದಾರೆ.ಶೇಕಡ 25.2 ರಷ್ಟು ಮಹಿಳೆಯರು ಬೇರೆ ಬೇರೆ ಕಾರ್ಯಗಳಲ್ಲಿ ತೊಡಗಿರುವುದು ಈ ಕೋಷ್ಟಕದಿಂದ ತಿಳಿದುಬರುತ್ತದೆ.

ಈ ಮೇಲಿನ ಅಂಕಿ ಅಂಶಗಳನ್ನು ಒಟ್ಟಾರೆಯಾಗಿ ನೋಡುವುದಾದರೆ ಶೇಕಡ 13.4 ರಷ್ಟು ಪುರುಷ ಮತ್ತು ಮಹಿಳೆಯರು ಶಿಕ್ಷಕ ವೃತ್ತಿಯಲ್ಲಿ ಇರುವುದು ಕಂಡುಬರುತ್ತದೆ. ಶೇಕಡ 2.8 ರಷ್ಟು ಪುರುಷ ಮತ್ತು ಮಹಿಳೆಯರು ಆರಕ್ಷಕ (ಪೋಲಿಸ್)ರ ಹುದ್ದೆಯಲ್ಲಿರುವುದು ತಿಳಿದುಬರುತ್ತದೆ. ಶೇಕಡ 18.4ರಷ್ಟು ಪುರುಷ ಮತ್ತು ಮಹಿಳೆಯರು ಕೃಷಿಯಲ್ಲಿ ತೊಡಗಿರುವುದು ಕಂಡುಬರುತ್ತದೆ, ಶೇಕಡ 13.4 ರಷ್ಟು ಪುರುಷ ಮತ್ತು ಮಹಿಳೆಯರು ವ್ಯಾಪರವಹಿವಾಟಿಯಲ್ಲಿ ತೊಡಗಿರುವುದು ಕಂಡುಬರುತ್ತದೆ.ಶೇಕಡ 16.8 ರಷ್ಟು ಪುರುಷ ಮತ್ತು ಮಹಿಳೆಯರು ದಿನನಿತ್ಯದ ಕೂಲಿ ಕೆಲಸಗಳಲ್ಲಿ ತೊಡಗಿರುವುದು ಕಂಡುಬರುತ್ತದೆ.ಶೇಕಡ 11.6 ರಷ್ಟು ಮಹಿಳೆಯರು ಮನೆಗೆಲಸದಲ್ಲಿ ತೊಡಗಿದ್ದವರಾಗಿದ್ದರೆ.ಶೇಕಡ 23.6 ರಷ್ಟು ಪುರುಷ ಮತ್ತು ಮಹಿಳೆಯರು ಬೇರೆ ಬೇರೆ ಕಾರ್ಯಗಳಲ್ಲಿ ಭಾಗಿಗಳಾಗಿರುವುದು ತಿಳಿದು ಬರುತ್ತದೆ.

ಮಾಹಿತಿದಾರರಿಗೆ ರಾಜಕೀಯದಲ್ಲಿ ಪಾಲ್ಗೋಳ್ಳುವಿಕೆಯಲ್ಲಿ ಆಸಕ್ತಿಯ ವಿವರ

| ಅಭಿಪ್ರಾಯಗಳು | ಪುರುಷರು | ಪ್ರತಿಶತ | ಮಹಿಳೆಯರು | ಪ್ರತಿಶತ | ಒಟ್ಟು | ಪ್ರತಿಶತ |
|---|---|---|---|---|---|---|
| ಹೌದು | 60 | 24 | 40 | 16 | 100 | 20 |
| ಇಲ್ಲ | 190 | 76 | 210 | 84 | 400 | 80 |
| ಒಟ್ಟು | 250 | 100 | 250 | 100 | 500 | 100 |

(ಮೂಲ: ಕ್ಷೇತ್ರ ಅಧ್ಯಯನದಲ್ಲಿ ಸಂಗ್ರಹಿಸಿದ ಅಂಕಿ ಅಂಶಗಳ ವಿವರ)

ಈ ಮೇಲಿನ ಕೋಷ್ಟಕವು ಬಂಜಾರ ಸಮುದಾಯದ ಕುಟುಂಬಗಳಲ್ಲಿ ರಾಜಕೀಯ ರಂಗದಲ್ಲಿ ಪಾಲ್ಗೋಳ್ಳುವಿಕೆಯ ಬಗ್ಗೆ ಮಾಹಿತಿ ತಿಳಿಸುತ್ತದೆ. ಶೇಕಡ 24 ರಷ್ಟು, ಪುರುಷ ಮಾಹಿತಿದಾರರು ರಾಜಕೀಯದಲ್ಲಿ ಪಾಲ್ಗೋಳ್ಳಲು ಆಸಕ್ತಿ ವಹಿಸಿರುವುದು ತಿಳಿದು ಬಂದಿದೆ, ಶೇಕಡ 76ರಷ್ಟು, ಪುರುಷ ಮಾಹಿತಿದಾರರು ರಾಜಕೀಯದಲ್ಲಿ ಪಾಲ್ಗೋಳ್ಳಲು ಆಸಕ್ತಿವಿಲ್ಲವೆಂದು ಹೇಳಿದ್ದಾರೆ, ಶೇಕಡ 16 ರಷ್ಟು, ಮಹಿಳಾ ಮಾಹಿತಿದಾರರು ರಾಜಕೀಯದಲ್ಲಿ ಪಾಲ್ಗೋಳ್ಳಲು ಆಸಕ್ತಿ ಇರುವುದು ತಮ್ಮ ಅಭಿಪ್ರಾಯ ತಿಳಿಸಿದ್ದಾರೆ, ಶೇಕಡ 84 ರಷ್ಟು, ಮಹಿಳಾ ಮಾಹಿತಿದಾರರು ರಾಜಕೀಯದಲ್ಲಿ ಪಾಲ್ಗೊಳ್ಳಲು ಆಸಕ್ತಿ ಇಲ್ಲವೆಂದು ತಮ್ಮ ಅಭಿಪ್ರಾಯ ತಿಳಿಸಿದ್ದಾರೆ.

ಒಟ್ಟಾರೆಯಾಗಿ ಶೇಕಡ 20 ರಷ್ಟು, ಪುರುಷ ಮತ್ತು ಮಹಿಳಾ ಮಾಹಿತಿದಾರರು ರಾಜಕೀಯ ವಿಷಯದಲ್ಲಿ ಪಾಲ್ಗೊಳ್ಳಲು ಆಸಕ್ತಿ ವಹಿಸಿದರೆ, ಶೇಕಡ 80 ರಷ್ಟು, ಪುರುಷ ಮತ್ತು ಮಹಿಳಾ ಮಾಹಿತಿದಾರರು ರಾಜಕೀಯ ವಿಷಯದಲ್ಲಿ ಪಾಲ್ಗೋಳ್ಳಲು ನಿರಾಸಕ್ತಿ ತೋರಿಸಿರುವುದು ಸಂಶೋಧನ ಅಧ್ಯಯನದಿಂದ ತಿಳಿದು ಬಂದಿದೆ. ಹಾಗಾಗಿ ಇಲ್ಲಿ ಬಂಜಾರ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ರಾಜಕೀಯ ವಿಷಯಗಳಲ್ಲಿ ಪಾಲ್ಗೊಳ್ಳಲು ಮುಂದೆ ಬರಬೇಕು ತಮ್ಮ ಸಮುದಾಯವನ್ನು ಬೇರೆ ಸಮುದಾಯಗಳ ಹಾಗೇ ಮೇಲ್ಪಂಕ್ತಿಯಲ್ಲಿ ತರಲು ಶ್ರಮವಹಿಸಬೇಕು.

ಮಾಹಿತಿದಾರರ ಉಪಜಾತಿಗಳ ವರ್ಗೀಕರಣ

| ಕ್ರ.ಸಂ. | ಉಪಜಾತಿ | ಪುರುಷರು | ಪ್ರತಿಶತ | ಮಹಿಳೆಯರು | ಪ್ರತಿಶತ | ಒಟ್ಟು | ಪ್ರತಿಶತ |
|---|---|---|---|---|---|---|---|
| 1 | ರಾಠೋಡ | 98 | 39.2 | 88 | 35.2 | 186 | 23.6 |
| 2 | ನಾಯಕ | 62 | 24.8 | 60 | 24 | 122 | 24.4 |
| 3 | ಚವ್ಹಾಣ | 60 | 24 | 58 | 23.2 | 118 | 23.6 |
| 4 | ಪವಾರ | 12 | 4.8 | 20 | 8 | 32 | 6.4 |
| 5 | ಜಾಧವ | 18 | 7.2 | 24 | 9.6 | 42 | 8.4 |
| ಒಟ್ಟು | | 250 | 100 | 250 | 100 | 500 | 100 |

(ಮೂಲ: ಕ್ಷೇತ್ರ ಅಧ್ಯಯನದಲ್ಲಿ ಸಂಗ್ರಹಿಸಿದ ಅಂಕಿ ಅಂಶಗಳ ವಿವರ)

ಈ ಮೇಲಿನ ಕೋಷ್ಟಕವನ್ನು ಗಮನಿಸಿದಾದ ಪ್ರಸ್ತುತ ಸಂಶೋಧನಾ ಅಧ್ಯಯನಕ್ಕೆ ಬಂಜಾರ ಸಮುದಾಯದಲ್ಲಿ ಕಂಡುಬರುವ ಅನೇಕ ಉಪಜಾತಿಗಳ ಬಗ್ಗೆ ತಿಳಿದುಕೊಳ್ಳಲು ಆಧ್ಯಯನಕ್ಕಾಗಿ ಒಟ್ಟು 500 ಜನ ಮಾಹಿತಿದಾರರನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.ಅದರಲ್ಲಿ 250 ಪುರುಷರು ಮತ್ತು 250 ಮಹಿಳೆಯರನ್ನು ಆಯ್ಕೆ ಮಾಡಿಕೊಂಡಿದ್ದು, ಬಂಜಾರ ಜಾತಿಯಲ್ಲಿರುವ ಪ್ರಮುಖ ಉಪಜಾತಿಗಳಿಗೆ ಸಂಬಂಧಿಸಿದ ವಿವರಗಳನ್ನು ನೋಡಿದಾಗ ಶೇಕಡ 39.2ರಷ್ಟು ಪುರುಷರು ರಾಠೋಡ ಉಪಜಾತಿಗೆ ಸೇರಿದರೆ, ಶೇಕಡ 24.8 ರಷ್ಟು ಪುರುಷರು ನಾಯಕ ಉಪಜಾತಿಗೆ ಸೇರಿದವರಾಗಿದ್ದಾರೆ.ಶೇಕಡ 24 ರಷ್ಟು ಪುರುಷರು ಚವ್ಹಾಣ ಉಪಜಾತಿಗೆ ಸೇರಿದರೆ, ಶೇಕಡ 4.8 ರಷ್ಟು ಪುರುಷರು ಪವಾರ ಉಪಜಾತಿಗೆ ಸೇರಿದ್ದಾರೆ.ಶೇಕಡ 7.2 ರಷ್ಟು ಪುರುಷರು ಜಾಧವ ಉಪಜಾತಿಗೆ ಸೇರಿಕೊಂಡಿರುವುದು ಈ ಕೋಷ್ಟಕದ ಸಹಾಯದಿಂದ ತಿಳಿದುಬರುತ್ತದೆ.ಇದೇ ರೀತಿ ಮಹಿಳಾ ಮಾಹಿತಿದಾರರ ಉಪಜಾತಿಗಳನ್ನು ನೋಡಿದಾಗ ಶೇಕಡ 35.2 ರಷ್ಟು ಮಹಿಳೆಯರು ರಾಠೋಡ ಉಪಜಾತಿಗೆ ಸೇರಿದರೆ, ಶೇಕಡ 24 ರಷ್ಟು

ಮಹಿಳೆಯರು ನಾಯಕ ಉಪಜಾತಿಗೆ ಸೇರಿದ್ದಾರೆ.ಶೇಕಡ 23.2 ರಷ್ಟು ಮಹಿಳೆಯರು ಚವ್ಹಾಣ ಉಪಾಜಾತಿಗೆ ಸೇರಿದ್ದು, ಶೇಕಡ 8 ರಷ್ಟು ಮಹಿಳೆಯರು ಪವಾರ ಉಪಜಾತಿಗೆ ಸೇರಿದ್ದಾರೆ.ಶೇಕಡ 9.6 ರಷ್ಟು ಮಹಿಳೆಯರು ಜಾಧವ ಉಪಜಾತಿಗೆ ಸೇರಿದ್ದಾರೆ ಎಂದು ಅಧ್ಯಯನದಿಂದ ತಿಳಿದು ಬರುತ್ತದೆ.ಒಟ್ಟಾರೆಯಾಗಿ ಶೇಕಡ 23.6 ರಷ್ಟು ಪುರುಷ ಮತ್ತು ಮಹಿಳಾ ಮಾಹಿತಿದಾರರು ರಾಠೋಡ ಉಪಜಾತಿಗೆ ಸೇರಿದರೆ, ಶೇಕಡ 24.4 ರಷ್ಟು ಪುರುಷ ಮತ್ತು ಮಹಿಳಾ ಮಾಹಿತಿದಾರರು ನಾಯಕ ಉಪಜಾತಿಗೆ ಸೇರಿದ್ದಾರೆ.ಶೇಕಡ 23.6 ರಷ್ಟು ಪುರುಷ ಮತ್ತು ಮಹಿಳಾ ಮಾಹಿತಿದಾರರು ಚವ್ಹಾಣ ಉಪಾಜಾತಿಗೆ ಸೇರಿದ್ದು, ಶೇಕಡ 6.4 ರಷ್ಟು ಪುರುಷ ಮತ್ತು ಮಹಿಳಾ ಮಾಹಿತಿದಾರರು ಪವಾರ ಉಪಜಾತಿಗೆ ಸೇರಿದ್ದಾರೆ.ಶೇಕಡ 8.4 ರಷ್ಟು ಪುರುಷ ಮತ್ತು ಮಹಿಳಾ ಮಾಹಿತಿದಾರರು ಜಾಧವ ಉಪಜಾತಿಗೆ ಸೇರಿದ್ದಾರೆ ಎಂದು ಅಧ್ಯಯನದಿಂದ ತಿಳಿದು ಬರುತ್ತದೆ.

**ಸಂಶೋಧನಾ ಅಧ್ಯಯನದ ಫಲಿತಗಳು**

1. ಹೆಚ್ಚಿನ ಪ್ರಮಾಣದಲ್ಲಿ ಬಂಜಾರ ಸಮುದಾಯದವರು ಸ್ನಾತಕೋತ್ತರ ಪದವಿಯನ್ನು ವ್ಯಾಸಂಗ ಮಾಡುತ್ತಿದ್ದಾರೆ ಮತ್ತು ಪದವಿ ಶಿಕ್ಷಣವನ್ನು ಶೇಕಡಾ 22 ರಷ್ಟು ಕಂಡು ಬರುತ್ತಿದ್ದಾರೆ. ಇದರಿಂದ ಬಂಜಾರ ಸಮುದಾಯದ ಕುಟುಂಬಗಳ ಮೇಲೆ ಶಿಕ್ಷಣದ ಅರಿವು ಮತ್ತು ಸ್ವಾವಲಂಬನೆ ಇರುವದು ತಿಳಿದು ಬಂದಿದೆ.
2. ಅಧಿಕ ಸಂಖ್ಯೆಯಲ್ಲಿ ಪುರುಷರು ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಹಾಗೂ ನಂತರದ ಸ್ಥಾನದಲ್ಲಿ ಶಿಕ್ಷಣ ಮತ್ತು ವ್ಯಾಪಾರವಹಿವಾಟುಗಳಲ್ಲಿ ತೊಡಗಿಕೊಂಡಿರುವುದು ಕಂಡುಬರುತ್ತದೆ.ಹೆಚ್ಚಿನ ಪ್ರಮಾಣದಲ್ಲಿ ಮಹಿಳೆಯರು ಮನೆಕೆಲಸದಲ್ಲಿ ಮತ್ತು ಪುರುಷರಂತೆ ಮಹಿಳೆಯರೂ ಕೂಡಾ ಕೃಷಿ ಚಟುವಟಿಕೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ.
3. ಹೆಚ್ಚಿನ ಪ್ರಮಾಣದ ಬಂಜಾರ ಸಮುದಾಯದವರು ರಾಜಕೀಯದಲ್ಲಿ ಪಾಲ್ಗೊಳ್ಳುವಿಕೆಯು ತೃಪ್ತಿಕರವಾಗಿಲ್ಲ ವೆಂದು ಕಂಡುಬರುತ್ತದೆ. ಆದರೂ ಅಲ್ಪ ಪ್ರಮಾಣದಲ್ಲಿ ಶೇ 24% ರಷ್ಟು ಪುರುಷ ಮತ್ತು ಮಹಿಳೆಯರು ರಾಜಕೀಯದಲ್ಲಿ ಪಾಲ್ಗೊಳ್ಳುತ್ತಿದ್ದು ಕಂಡು ಬರುತ್ತದೆ. ಇದರಿಂದ ತಿಳಿದು ಬರುವದೇನೆಂದರೆ ಬಂಜಾರ ಸಮುದಾಯದವರು ರಾಜಕೀಯವಾಗಿ ಬಹಳ ಹಿಂದೆ ಬಿದ್ದಿದ್ದಾರೆ ಎಂದು ತಿಳಿದು ಬರುತ್ತದೆ.
4. ಬಂಜಾರ ಸಮುದಾಯದಲಿ ಶೇಕಡ 23.6 ರಷ್ಟು ಪುರುಷ ಮತ್ತು ಮಹಿಳಾ ಮಾಹಿತಿದಾರರು ರಾಠೋಡ ಉಪಜಾತಿಗೆ ಸೇರಿದರೆ, ಶೇಕಡ 24.4 ರಷ್ಟು ಪುರುಷ ಮತ್ತು ಮಹಿಳಾ ಮಾಹಿತಿದಾರರು ನಾಯಕ ಉಪಜಾತಿಗೆ ಸೇರಿದ್ದಾರೆ. ಶೇಕಡ 23.6 ರಷ್ಟು ಪುರುಷ ಮತ್ತು ಮಹಿಳಾ ಮಾಹಿತಿದಾರರು ಚವ್ಹಾಣ ಉಪಾಜಾತಿಗೆ ಸೇರಿದ್ದು, ಶೇಕಡ 6.4ರಷ್ಟು ಪುರುಷ ಮತ್ತು ಮಹಿಳಾ ಮಾಹಿತಿದಾರರು ಪವಾರ ಉಪಜಾತಿಗೆ ಸೇರಿದ್ದಾರೆ. ಶೇಕಡ 8.4 ರಷ್ಟು ಪುರುಷ ಮತ್ತು ಮಹಿಳಾ ಮಾಹಿತಿದಾರರು ಜಾಧವ ಉಪಜಾತಿಗೆ ಸೇರಿದ್ದಾರೆ ಎಂದು ಅಧ್ಯಯನದಿಂದ ತಿಳಿದು ಬರುತ್ತದೆ.

**ಉಪಸಂಹಾರ**

ಬಂಜಾರ ಸಮುದಾಯವು ಮೋಘಲರ ಕಾಲದಿಂದಲೂ ವ್ಯಾಪಾರ ವಹಿವಾಟು ಮತ್ತು ಸೈನಿಕರಿಗೆ ಆಹಾರ ಔಷದೋಪಗಳನ್ನು ಪೂರೈಸಿಕೊಂಡು ಬಂದಿರುವ ಸಮುದಾಯವಾಗಿದೆ.ಕಾಲಾನಂತರ ನಗರ ಪ್ರದೇಶಗಳ ಹತ್ತಿರ ತಮ್ಮ ತಾಂಡಾಗಳನ್ನು ನಿರ್ಮಿಸಿಕೊಂಡು ಮುಂದುವರೆದ ಸಮುದಾಯಗಳ ಜೊತೆಗೆ ಉತ್ತಮ ಬಾಂಧವ್ಯ ಬೆಳೆಸಿಕೊಂಡು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುವುದರ ಕಡೆಗೆ ಹೆಚ್ಚಿನ ಗಮನ ಹರಿಸಿದ್ದಾರೆ.ಅಷ್ಟೇ ಅಲ್ಲದೇ ರಾಜಕೀಯದಲ್ಲಿ ಬಂಜಾರ ಸಮುದಾಯದ ಅನೇಕರು ತೊಡಗಿರುವುದು ಕಂಡು ಬಂದಿದೆ.ಅಲೆಮಾರಿ ಸಮುದಾಯವಾಗಿದ್ದ ಬಂಜಾರ ಸಮುದಾಯವು ಇಂದು ಸಮ ಸಮಾಜದ ಜೊತೆಗೆ ಬೆರೆತುಕೊಂಡು ತಮ್ಮ ಜೀವನ ಸಾಗಿಸಿಕೊಂಡು ಹೋಗುತ್ತಿರುವುದು ಕಂಡು ಬರುತ್ತದೆ.ಸರ್ಕಾರದ ಅನೇಕ ಸೌಲಭ್ಯಗಳನ್ನು ಸದುಪಯೋಗಪಡೆದುಕೊಂಡು, ಶಿಕ್ಷಣ ಮತ್ತು ರಾಜಕೀಯದಲ್ಲಿರುವ ಉತ್ತಮ ಅವಕಾಶಗಳನ್ನು ಬಳಸಿಕೊಂಡು ಸಮುದಾಯದ ಅಭಿವೃದ್ಧಿಯ ಕಡೆಗೆ ಗಮನಹರಿಸಬೇಕು.

**ಆಧಾರ ಗ್ರಂಥಗಳು**


1. ಡಾ. ಪಂಡಿತ ಕೆ.ರಾಠೋಡ (2015). ಬಂಜಾರ ಸಂಸ್ಕೃತಿ ಕಥನ, ಕರ್ನಾಟಕ ಸಾಹಿತ್ಯ ಅಕಾಡೆಮಿ.
2. ಸಣ್ಣರಾಮನಾಯಕ್, 'ಲಂಬಾಣಿ ಸಂಸ್ಕೃತಿ–ಒಂದು ಸಾಂಸ್ಕೃತಿಕ ಅಧ್ಯಯನ' (1999)
3. ಸುಭಾಶ್ ಆರ್ ಜಾಧವ್., "ಲಂಬಾಣಿ ಮೈಗ್ರೇಂಟ್ಸ ಎ ಸೋಶಿಯಾಲಜಿ ಸ್ಟಡಿ" (2019)
4. ಪವಾರ ಹರಿಲಾಲ್ (1996).ಲಂಬಾಣಿ ಮದುವೆ ಸಂಪ್ರದಾಯ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
5. ಲಲಿತಾ ನಾಯ್ಕ್ ಬಿ.ಟಿ. (1998) ದೇಶ–ವಿದೇಶಗಳಲ್ಲಿ ಲಂಬಾಣಿಗಳ ಸ್ಮರಣ ಸಂಚಿಕೆ ರಾಜ್ಯಮಟ್ಟದ ಲಂಬಾಣಿ ಸಮ್ಮೇಳನ ಬೆಂಗಳೂರು.